# ಅಜ್ಜಿ ಸೂಜಿ



ಹಗಲಿಡೀ ಹುಡುಕಿದಳು ಹಿತ್ತಿಲೆಲ್ಲ
ಸೂಜಿ ಸಿಕ್ಕಲಿಲ್ಲ

ಮಗ ಬಂದ, ಮೊಮ್ಮಗ, ಕೇರಿಯ ಜನ
ಸಿಗಲಿಲ್ಲ ಹುಡುಕಿದರೂ ಇಡೀ ದಿನ!

ದಣಿದು ಕೇಳಿದರಜ್ಜೀ, ಬಿದ್ದುದೆಲ್ಲಿ?
''ಒಳಗೆ, ಆ ಕತ್ತಲೆ ಕೋಣೆಯಲ್ಲಿ!''

''ಕಳೆದುದನು ಕಳೆದಲ್ಲೇ ಹುಡುಕಬೇಕು''
''ಒಪ್ಪಿದೆ. ಕತ್ತಲಲಿ ಹುಡುಕಲೆಂತು?''

''ಅದಕಾಗಿ ಬೆಳಕಲ್ಲಿ ಹುಡುಕುತಿರುವೆ.
ಅಜ್ಜಿಗೇ ಮರುಮಾತು! ನಿಮಗೆ ತರವೆ?''

''ಸರಿ ಅಜ್ಜಿ, ಒಳಹೋಗು, ದೀಪ ಬೆಳಗು
ಕಳೆದ ಸೂಜಿಯು ನಿನಗೆ ಸಿಕ್ಕಬಹುದು''

''ಅದು ನನಗೂ ಗೊತ್ತಿದೆ, ಸಿಗುವುದಲ್ಲೇ
ಕತ್ತಲಳಿದರೆ ಬೆಳಕು, ನಾನೂ ಬಲ್ಲೆ''

''ನನ್ನ ಸೂಜಿಯು ನನಗೆ ಸಿಕ್ಕುವಂತೆ
ನಿಮ್ಮ ದೇವರೂ ನಿಮಗೆ ಸಿಕ್ಕಲಂತೆ''

● **ಚಿಂತಾಮಣಿ ಕೊಡ್ಲೆಕೆರೆ**

ಕಲೆ: ವಾಗೀಶ ಹೆಗಡೆ